

# ನಿತ್ಯಹರಿದ್ವರ್ಣದ ನೀರೊಟ್ಟೆ ಮರ

**ನೂರು ಅಡಿಗೂ ಮೀರಿ ಬೆಳೆಯಬಲ್ಲ ನೀರೊಟ್ಟೆ ಮರ, ಗಮನಕ್ಕೆ ಬರುವ ಮೊದಲೇ ನಶಿಸಿ ಹೋಗುತ್ತಿರುವ ಸಸ್ಯ ಸಂತತಿಗಳಲ್ಲಿ ಒಂದು. ಈ ಅಪರೂಪದ ಮರವನ್ನು ಉಳಿಸಿಕೊಳ್ಳುವ ಕೆಲಸ ಜರೂರಾಗಿ ಆಗಿಬೇಕಿದೆ.**

■ ವಿನು ಗಂಗೆ

ನಮ್ಮ ಅಡಿಕೆ ತೋಟ ಮಾಡುವ ಹೊಸತು. ಯಾವುದೋ ಹಕ್ಕಿಯ ಹಿಕ್ಕೆಯಲ್ಲಿದ್ದ ಬೀಜದಿಂದ ಹುಟ್ಟಿತೋ ಅಥವಾ ಮೊದಲೇ ಇತ್ತೋ ನಮ್ಮ ಗಮನಕ್ಕೆ ಅದು ಬರುವಷ್ಟರಲ್ಲಿ ಒಂದು ಸಣ್ಣ ಮರದ ಹಂತ ತಲುಪಿಯಾಗಿತ್ತು.

ತೋಟದ ಮಧ್ಯದಲ್ಲಿ ಇದ್ದುದರಿಂದ ಒಂದು ದಿನ ತೋಟದಲ್ಲಿ ಕೆಲಸ ಮಾಡುವ ನಾಗರಾಜ, ಕೇಶವ 'ಈ ಮರ ತೆಗೀಬೇಕು ಸಾರ್, ಇಲ್ಲವಾದಲ್ಲಿ ಇದಕ್ಕೆ ಎಷ್ಟು ಜಾಗ ಇದ್ದರೂ ಸಾಲುವುದಿಲ್ಲ, ಸುತ್ತಲಿನ ಮರಗಳಲ್ಲಿ ಅಡಿಕೆ ಹಿಡಿಯುವುದಿಲ್ಲ' ಎಂದು ಯಜಮಾನರೆದುರು ಹೇಳುತ್ತಿದ್ದರು. ಕಾಫಿ ಟೀ ತೋಟಗಳಂತಲ್ಲದೆ, ಅಡಿಕೆ ತೋಟದ ನಡುವೆ ಯಾವ ಮರವನ್ನೂ ಬೆಳೆಸಲಾಗುವುದಿಲ್ಲ. ನಾನು ಅವರನ್ನು 'ಇದ್ಯಾವ ಮರ? ಇಂತಹ ಮರ ಸುತ್ತಮುತ್ತ ಬೇರೆ ಎಲ್ಲಾದರೂ ಇದೆಯೇ?' ಅಂತ ಕೇಳಿದೆ. 'ಗೊತ್ತಿಲ್ಲಕ್ಕ. ಕಾಡು ಜಾತಿ. ನಾವ್ಯಾಕೆ ನೋಡಕ್ಕೆ ಹೋಗೋಣ?' ಅಂತ ನನ್ನನ್ನೇ ಕೇಳಿದರು.

ಪೇಟೆಯವರನ್ನು ಬಿಡಿ. ಯಾವುದಾದರೂ ಮರ ತೋರಿಸಿ, ಸುತ್ತಮುತ್ತಲಿನ ಹಳ್ಳಿಯವರನ್ನು 'ಇದಾವ ಮರ?' ಅಂತ ಕೇಳಿ ನೋಡಿ. ಎಲ್ಲದಕ್ಕೂ ಒಂದೇ ಉತ್ತರ ಬರುತ್ತದೆ 'ಕಾಡು ಜಾತಿ'. 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಆದಿಕವಿ ಪಂಪನ ಮಾತು ಸಾಕ್ಷಾತ್ಕಾರವಾಗಿಲ್ಲದೇ ಹೋದರೂ ನಾಟಾ ಅಥವಾ ಫಲ ನೀಡುವ ಮರಗಳನ್ನು ಹೊರತುಪಡಿಸಿ ಉಳಿದ ಮರಗಳೆಲ್ಲ ಒಂದೇ ಜಾತಿ: 'ಕಾಡು ಜಾತಿ' ಎಂದು ಅವರು ತೀರ್ಮಾನಿಸಿಬಿಟ್ಟಿದ್ದಾರೆ. ನೋಡಿರದ, ಗೊತ್ತಿರದ ಮರವಾದರೂ ಯಜಮಾನರಲ್ಲಿ 'ಈಗ ಈ ಮರ ತೆಗೆಯುವುದು ಬೇಡ' ಎಂದೆ. ನನ್ನ ಸ್ವಭಾವ ಅರಿತವರಾದ್ದರಿಂದ ಇದ್ದುಕೊಳ್ಳಲಿ ಅಂತ ಸುಮ್ಮನಾದರು. ಆದರೂ ಒಳಗೊಳಗೇ ನನಗೆ ದಿಗಿಲು ಶುರುವಾಯಿತು. ಕೊಡಲಿಗೆ ಏನೇನೂ ಈಡಲ್ಲದ ಸಣ್ಣ ಮರ ನಾನು ಮುಂದಿನ ಸಲ ಊರಿಗೆ ಬರುವಾಗ ಇಲ್ಲದೇ ಹೋದರೆ? ಅಂತ.

ಸಸ್ಯಶಾಸ್ತ್ರಜ್ಞರಾದ ಪ್ರೊಫೆಸರ್ ಸಂಪತ್ ಕುಮಾರ್ ಅವರನ್ನು ಕೇಳಿ ಮರದ ವೈಜ್ಞಾನಿಕ ಹೆಸರು **Ficus Callosa** ಎಂದು ತಿಳಿದುಕೊಂಡೆ. ರೂಪುರೇಷೆ ತಾಳೆಯಾಯಿತು. ಕನ್ನಡದಲ್ಲಿ ನೀರು ವಾಟೆ ಅಥವಾ ನೀರೊಟ್ಟೆ ಮರ.